ನೋಡಲಿಲ್ಲ, ಅನುಭವಿಸಲಿಲ್ಲ. ಮುಂದೆ ಏನಾದರು ನೋಡುತ್ತೇನೊ ಇಲ್ಲ ನಾನೇ ಹಾಗೆ ನಡೆದುಕೊಳ್ಳುತ್ತೇನೊ ನೋಡಬೇಕು?

***

ದಮಯಂತಿಯ ಘಟನೆ ನಡೆದ ಮೇಲೆ ಪೊಲೀಸರು ಸ್ವಲ್ಪ ತೊಂದರೆ ಮಾಡುತ್ತಿದ್ದರು. ದಮಯಂತಿಯನ್ನು ಪದೇಪದೇ ಅವಳ ಕೇಸಿನಲ್ಲಿ ಸಹಕರಿಸುವಂತೆ ಕೇಳುತ್ತಿದ್ದರು. ನಾವು ಆ ಕೇಸನ್ನು ಮುಂದುವರಿಸದಂತೆ ಹೇಳಿ ಹಿಂದಕ್ಕೆ ಪಡೆದುಕೊಂಡೆವು. ಒಂದು ಸಲ ಪೊಲೀಸ್ ಠಾಣೆಯಲ್ಲಿ ಯಾವುದೇ ಕೇಸು ನೋಂದಣಿಯಾದರೆ ಅದನ್ನು ಅಷ್ಟು ಸುಲಭವಾಗಿ ಮುಚ್ಚಲು ಆಗುವುದಿಲ್ಲ. ಅದಕ್ಕೆ ಕೆಲವು ವಿಧಾನಗಳಿದ್ದು ಅದನ್ನು ನಿಧಾನವಾಗಿ ಮುಚ್ಚಲಾಯಿತು. ಮುಚ್ಚಲಾಯಿತು ಎನ್ನುವುದಕ್ಕಿಂತ ಹಾಗೇ ಬಿಟ್ಟು ಬಿಡಲಾಯಿತು ಎನ್ನಬಹುದು. ಪೊಲೀಸರು ನಮ್ಮ ವಿನಂತಿಯಂತೆ ಕೇಸನ್ನು ಶೋಧನೆಗೆ ತೆಗೆದುಕೊಳ್ಳದೆ ಸದ್ಯಕ್ಕೆ ಬಿಟ್ಟುಬಿಟ್ಟಿದ್ದರು. ನಮಗೆ ಆ ಕೇಸನ್ನು ಮುಂದುವರಿಸಲು ಸುತರಾಂ ಇಷ್ಟ ಇರಲಿಲ್ಲ. ಆಗಿದ್ದು ಒಂದು ಕೆಟ್ಟ ಕನಸಿನಂತೆ ಮರೆಯಲು ಪ್ರಯತ್ನಿಸುತ್ತಿದ್ದೆವು. ಆದರೆ ಪೊಲೀಸರು ನ್ಯಾಯಾಲಯದಲ್ಲಿ ದಮಯಂತಿಯ ಮೇಲೆ ಅತ್ಯಾಚಾರ ಪ್ರಯತ್ನ ನಡೆದಂತೆ ಇಂಡಿಯನ್ ಪೀನಲ್ ಕೋಡ್ (ಐಪಿಸಿ) ಸೆಕ್ಷನ್ 511 ಮತ್ತು ಲೈಂಗಿಕ ಅಪರಾಧ ಐಪಿಸಿ 354ಅ ಕೆಳಗೆ ದೂರು ದಾಖಲು ಮಾಡಿಬಿಟ್ಟಿದ್ದರು. ದಮಯಂತಿ ಕೂಡ ಬೆಂಗಳೂರನ್ನು ಬಿಟ್ಟು ಹೋಗಲು ನಿರ್ಧಾರ ತೆಗೆದು ಕೊಂಡುಬಿಟ್ಟಿದ್ದಳು.

ಒಂದು ತಿಂಗಳಾದ ಮೇಲೆ ಒಂದು ದಿನ ಮನೆಗೆ ಬಂದ ಸಬ್ ಇನ್ಸ್‌ಪೆಕ್ಟರ್ `ಸರ್ ನಿಮ್ಮ ಮಗಳ ಮೇಲೆ **Rape attempt** ಮಾಡಿದ ಹುಡುಗರು ಸಿಕ್ಕಿದ್ದಾರೆ. ಈಗ ಏನು ಮಾಡೋಣ ಹೇಳಿ' ಎಂದರು. ನಾನು ನನ್ನ ಮಾವನ ಜೊತೆಗೆ ಮಾತನಾಡಿದ ಮೇಲೆ `ಅವರನ್ನು ಬಿಟ್ಟುಬಿಡಿ, ನಾವು ಈ ಕೇಸನ್ನು ಮುಂದುವರಿಸಲು ಇಷ್ಟ ಇಲ್ಲ. ಆ ಹುಡುಗರನ್ನು ನೋಡುವುದಕ್ಕೂ ನಮಗೆ ಇಷ್ಟ ಇಲ್ಲ' ಎಂದೆ. ಸಬ್ ಇನ್ಸ್‌ಪೆಕ್ಟರ್ `ಹಾಗಾದರೆ ದಯವಿಟ್ಟು ನಿಮ್ಮ ಮಗಳನ್ನು ಪೊಲೀಸ್ ಠಾಣೆಗೆ ಒಂದು ಸಲ ಕರೆದುಕೊಂಡು ಬಂದು ಕೇಸ್ ವಾಪಸ್ ತೆಗೆದುಕೊಂಡುಬಿಡಿ. ನೀವು ಹೇಳೋದು ಸರೀನೆ. ಸುಮ್ಮನೆ ನ್ಯಾಯಾಲಯಕ್ಕೆ ಹೋಗುವುದು. ಅಲ್ಲಿ ಕೇಸು ನಡೆಯುವುದು. ಅದು ಟಿವಿ ಚಾನೆಲ್ಗಳಲ್ಲಿ ಮತ್ತೆ ಬರುವುದು. ಹೆಣ್ಣು ಮಗುವಿನ ಭವಿಷ್ಯ. ಹಾಗೇ ಮಾಡಿ ಸರ್ ಒಳ್ಳೇದು' ಎಂದರು ಸಬ್ ಇನ್ಸ್‌ಪೆಕ್ಟರ್ ನಾವು ಕೊನೆಗೆ ಒಳ್ಳೆಯ ನಿರ್ಧಾರವನ್ನೇ ತೆಗೆದುಕೊಂಡಿದ್ದೆವು.

ದಮಯಂತಿಗೆ ಅನ್ಯಾಯ ನಡೆದು ಎರಡು ವರ್ಷಗಳೇ ಕಳೆದುಹೋಗಿದ್ದವು. ಕೆಲವು ತಿಂಗಳು ಕಾಲ ನಮ್ಮ ಇಡೀ ಕುಟುಂಬದ ಸದಸ್ಯರು ಖಿನ್ನತೆಗೆ ಸಿಕ್ಕಿಕೊಂಡು ನಲುಗಿ ಹೋಗಿದ್ದರು. ಆದರೆ ಈಗ ಎಲ್ಲರೂ ಮಾಮೂಲಿ ಸ್ಥಿತಿಗೆ ಬರದಿದ್ದರೂ ಸಾಕಷ್ಟು ಸುಧಾರಿಸಿಕೊಂಡಿದ್ದೆವು. ಸಾವಿತ್ರಿ ಈ ಮನೆಯನ್ನು ಮಾರಿಕೊಂಡು ಬೇರೆ ಎಲ್ಲಾದರೂ ದೂರ ಹೋಗಿ ಬಿಡಬೇಕೆಂದು ಸುಮಾರು ದಿನ ದುಂಬಾಲು ಬಿದ್ದಿದ್ದಳು. ನಾನು, ಅವರ ತಂದೆ ತಾಯಿ, ಅವಳಿಗೆ ಹೇಳಿಹೇಳಿ ಸಾಕಾಗಿ ಕೊನೆಗೆ ಸುಮ್ಮನಾಗಿದ್ದಳು. ಸಮಾಧಾನದ ಸಂಗತಿಯೆಂದರೆ ದಮಯಂತಿ ಸಾಕಷ್ಟು ಸುಧಾರಿಸಿಕೊಂಡಿದ್ದು ಅಮೆರಿಕಾದ ಒಂದು ವಿಶ್ವವಿದ್ಯಾಲಯದಲ್ಲಿ ಎಂ.ಎಸ್.ಗೆ ಸೀಟು ಸಿಕ್ಕಿ ದೇಶ ಬಿಟ್ಟು ಹೊರಗೆ ಹೋಗಲು ತಯಾರಿ ಮಾಡಿಕೊಳ್ಳುತ್ತಿದ್ದಳು.

ಇನ್ನೊಂದು ಸಮಾಧಾನದ ಸಂಗತಿ ಎಂದರೆ ಮಾನಸಿಕವಾಗಿ ದಮಯಂತಿಗಿಂತ ಹೆಚ್ಚು ಮಾನಸಿಕ ತೊಂದರೆಗೆ ಒಳಗಾಗಿದ್ದ ಸಾವಿತ್ರಿ ಮಾಮೂಲಿಯಾಗಿದ್ದಳು. ತೇಜಸ್ ಕೊನೆಗೂ ರಾಧಾಳನ್ನು ಮರೆಯುತ್ತಾ ಬಂದಿದ್ದ. ಕಾರಣ ದಮಯಂತಿಯ ಸಮಸ್ಯೆಯಿಂದ ರಾಧಾಳ ಮನೆಯವರು ಅವಳಿಗೆ ಏನು ಹೇಳಿದರೊ? ಏನು ಮಾಡಿದರೊ? ರಾಧಾ ಕೊನೆಗೆ `**It will not going to work**' ಎಂದು ತೇಜಸ್‌ಗೆ ತಿಳಿಸಿ ದೂರವಾಗಿದ್ದಳು. ರಾಧಾ ದೂರವಾಗಿದ್ದೆ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದ ತೇಜಸ್ ಎರಡು ವರ್ಷಗಳಿಂದಲೂ ಅವರ ಅಜ್ಜಿ ತಾತನ ನೆರವಿನಿಂದ ಮಾನಸಿಕ ಒತ್ತಡದಿಂದ ದೂರವಾಗಿ ಈಗೀಗ ಅದರಿಂದ ಹೊರಗೆ ಬಂದಿದ್ದ. ಎರಡು ವರ್ಷಗಳ ನಂತರ ತೇಜಸ್‌ಗೆ ಹೈದರಾಬಾದ್‌ನಲ್ಲಿ ಕೆಲಸ ದೊರಕಿತ್ತು. ನಮಗೆ ತೇಜಸ್ನನ್ನು ಹೈದರಾಬಾದ್‌ಗೆ ಕಳುಹಿಸಲು ಇಷ್ಟ ಇರಲಿಲ್ಲ. `ನನಗೆ ಕೆಲಸ ಇಲ್ಲದೆ ಇದ್ದರೆ ಮತ್ತೆ ಸಮಸ್ಯೆ ಆಗುತ್ತದೆ. ಹೈದರಾಬಾದ್ನಲ್ಲಿ ಕೆಲಸ ಮಾಡುತ್ತಲೇ ಬೆಂಗಳೂರಿನ ಯಾವುದಾದರು ಕಂಪನಿಯಲ್ಲಿ ಕೆಲಸಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲಿ ಕೆಲಸ ಸಿಕ್ಕಿದ ತಕ್ಷಣ ವಾಪಸ್ ಬಂದುಬಿಡುತ್ತೇನೆ' ಎಂದು ನಮ್ಮನ್ನು ಒಪ್ಪಿಸಿದ್ದ. ನಾವು ವಿಧಿ ಇಲ್ಲದೆ ಒಪ್ಪಿಕೊಂಡಿದ್ದೆವು.

ಇದರ ನಡುವೆ ತೇಜಸ್ ಇನ್ನೊಂದು ಹುಡುಗಿಯ ಜೊತೆಗೆ ಪ್ರೀತಿಯಲ್ಲಿ ಸಿಲುಕಿಕೊಂಡಿದ್ದ. ಈ ವಿಷಯವನ್ನು ನನ್ನ ಮಾವ ಗುರುನಾಥ್ ಅವರು ನಮ್ಮ ಮನೆಗೆ ಬಂದು ಸಾವಿತ್ರಿಗೆ ಹೇಳಿ ಹೋಗಿದ್ದರು. ಈಗ ಸಾವಿತ್ರಿ ಇನ್ನೊಂದು ಶಾಕ್ಗೆ ಒಳಗಾಗಿ ವಿಷಯವನ್ನು ನನಗೆ ತಿಳಿಸಿದಳು. ನನಗೇಕೊ ಸ್ವಲ್ಪ ತಲೆ ಕೆಟ್ಟಂತಾಗಿ ಸಾವಿತ್ರಿಯ ಮೇಲೆ ಮೊದಲಿಗೆ ರೇಗಾಡಿ ಕೊನೆಗೆ ಪರಿಸ್ಥಿತಿಯನ್ನು ಅರಿತುಕೊಳ್ಳಲು ಪ್ರಯತ್ನಿಸಿದೆ. ಸಾವಿತ್ರಿ ಮಾತ್ರ ಏನು ಮಾಡಲು ಸಾಧ್ಯ? ತೇಜಸ್‌ನದೂ ತಪ್ಪಿಲ್ಲ. ಮದುವೆ ಮಾಡಿಕೊಳ್ಳುವ ವಯಸ್ಸು. ಹುಡುಗ ಹುಡುಗಿಯರಿಗೆ ಈ ಕಾಲದಲ್ಲಿ ಜೊತೆ ಬೇಕೇಬೇಕು. ಆ ಹುಡುಗಿ ನನ್ನ ಮಾವನ ಮನೆಯ ಹತ್ತಿರ ಇದ್ದ ಪರಿಚಯದವರ ಒಂದು ಕುಟುಂಬಕ್ಕೆ ಸೇರಿದವಳಾಗಿದ್ದಳು. ನನ್ನ ಅತ್ತೆ ಮಾವ, ಹುಡುಗ ಅದೇನೊ ಮಾಡಿಕೊಳ್ಳಲಿ ಮದುವೆ ವಿಷಯ ಬಂದಾಗ ನೋಡಿಕೊಳ್ಳೋಣ ಎಂದು ಹೇಳಿದರಂತೆ. ಈ ಸಮಸ್ಯೆ ಎಲ್ಲಿಗೆ ಹೋಗಿ ಮುಗಿಯುತ್ತದೊ? ಆಗಿದ್ದು ಆಗಲಿ ಎಂದು ಸುಮ್ಮನಾದೆ. ಇನ್ನು ಈಗ ತೇಜಸ್ ಮದುವೆ ವಿಷಯದ ಬಗ್ಗೆ ಮಾತನಾಡುವ ಸಂಭವ ಇರಲಿಲ್ಲ. ಯಾಕೆಂದರೆ ಮೊದಲು ದಮಯಂತಿಯ ಮದುವೆ ಆಗಬೇಕು. ನಂತರವೇ ತೇಜಸ್ ಮದುವೆ ಎಂದು ನಾನು, ಸಾವಿತ್ರಿ ಮೊದಲಿಂದಲೇ ತೀರ್ಮಾನ ಮಾಡಿಕೊಂಡಿದ್ದೆವು.

***

ಕೆಲವು ವಿಷಯಗಳನ್ನು ಕೇಳುತ್ತಿದ್ದರೆ ಈ ತಲೆಮಾರುಗಳ ನಡುವಿನ ಅಂತರ ಬಹಳ ಬೇಗನೆ ಹೆಚ್ಚಾಗುತ್ತಿದ್ದು ಅಪ್ಪ ಅಮ್ಮ ಮಕ್ಕಳ ಮಧ್ಯೆ ಅದೊಂದು ಸಾಮಾಜಿಕ ಅಂತರ, ಸಾಂಸ್ಕೃತಿಕ ಸಂಘರ್ಷವಾಗಿ ಕಾಣಿಸಿಕೊಂಡು ತೀವ್ರ ತರವಾದ ಅಂತರವನ್ನು ಸೃಷ್ಟಿಸುತ್ತಿದೆ. ಇದೆಲ್ಲವನ್ನು ನೋಡುತ್ತಿದ್ದರೆ ಮುಂದಿನ ದಿನಗಳ ಬಗ್ಗೆ ಗಾಬರಿಯಾಗುತ್ತಿತ್ತು. ಯೂರೋಪ್‌ನಲ್ಲಿ ಇದೇ ರೀತಿಯ ಸಾಮಾಜಿಕ ಮಾರ್ಪಾಟುಗಳು ಪಲ್ಲಟಗೊಂಡು ಯುವಕ/ ಯುವತಿಯರು ಹದಿನೆಂಟು ಇಪ್ಪತ್ತು ವರ್ಷಗಳು ತುಂಬುವುದರೊಳಗೆ ಮನೆಯಿಂದ ಪ್ರತ್ಯೇಕಗೊಂಡು ಪೋಷಕರಿಂದ ದೂರವಾಗಿ ಬಿಡುತ್ತಿದ್ದಾರೆ. ಒಬ್ಬೊಬ್ಬರಿಗೆ ನಾಲ್ಕಾರು ಮದುವೆಗಳು ಅದರ ಜೊತೆಜೊತೆಗೆ ವಿಚ್ಛೇದನೆಗಳು ನಡೆದುಹೋಗುತ್ತವೆ. ಅಲ್ಲಿ ಕುಟುಂಬದ ಸಂಬಂಧಗಳು ಎಲ್ಲಿ ಉಳಿದಿರುತ್ತವೆ? ಈಗೀಗ ಅಲ್ಲಿನ ಯುವಕ ಯುವತಿಯರು ಮದುವೆ ಮಾಡಿಕೊಳ್ಳುವುದನ್ನು ಬಿಟ್ಟು `**Live in together relationship** ನಲ್ಲಿ ಬದುಕುತ್ತಾರೆ. ಇಷ್ಟ ಇಲ್ಲದಿದ್ದರೆ ಪ್ರತ್ಯೇಕವಾಗಿಬಿಡುತ್ತಾರೆ. ಛಿದ್ರಛಿದ್ರವಾಗಿರುವ ಯುರೋಪ್ ಜೀವನ ಶೈಲಿಯನ್ನು ನಮ್ಮ ದೇಶದ ಯುವ ತಲೆಮಾರು ಅನುಸರಿಸಲು ಹೋಗುತ್ತಿದ್ದರೆ, ಯೂರೋಪ್ ಜನರು ಭಾರತದ ಕುಟುಂಬ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ತವಕಿಸುತ್ತಿದ್ದಾರೆ. ಇನ್ನೂ ಮುಂದೆ ಹೋಗಿರುವ ಬಹಳ ದೇಶಗಳು ಸಲಿಂಗ ಮದುವೆಗಳನ್ನು ಕಾನೂನಿನಲ್ಲಿ ಅಳವಡಿಸಿಕೊಂಡಿವೆ. ನಿಸರ್ಗದಲ್ಲಿರುವ ಪಶು ಪಕ್ಷಿಗಳೂ ಸಹ ಮಾಡದಂತಹ ಹೇಯ ಕೃತ್ಯ ಇದಾಗಿದೆ. ಇಂತಹ ಹೇಯ ಕಾನೂನನ್ನು ಭಾರತದಲ್ಲೂ ಅಳವಡಿಸುವಂತೆ ಕೆಲವು ಸಂಘ ಸಂಸ್ಥೆಗಳು ಹೋರಾಟ ನಡೆಸುತ್ತಿವೆ. ಒಂದು ನಾಗರಿಕ ಸಮಾಜ ಸಂಪೂರ್ಣವಾಗಿ ದಿವಾಳಿಯಾಗುತ್ತಿರುವ ಸಂಕೇತ ಇದಾಗಿದೆ. ಈ ಸಲಿಂಗಕಾಮಿಗಳು ಮುಂದೊಂದು ದಿನ ಗರ್ಭ ಧರಿಸುವ ವೈಜ್ಞಾನಿಕ ಸಂಶೋಧನೆಗಳನ್ನು ಕೆಲವು ತಲೆಕೆಟ್ಟ ವಿಜ್ಞಾನಿಗಳು ನಡೆಸಿದರೂ ನಡೆಸಬಹುದು. ಇದರ ನಡುವೆ ಈಗಾಗಲೆ ಸಮಾನತೆಗಾಗಿ ಹೋರಾಡುತ್ತಿರುವ ತೃತೀಯಲಿಂಗಿಗಳ ಗತಿ ಏನಾಗಬಹುದು?

**(ಸಶೇಷ)**